# ಪುಸ್ತಕ ಪರಿಚಯ

**ಋಗ್ವೇದ ಸೂಕ್ತಸಾರ**

**ಗ್ರಂಥಕರ್ತರು ಮತ್ತು ಪ್ರಕಾಶಕರು :**
**ಸೂರ್ಯನಾರಾಯಣ**
**'ಇಂದ್ರ' ಬಿ-೧/೧೧, ಬಿ.ಡಿ.ಎ. ಕಟ್ಟಡಗಳು,**
**ಕಲ್ಲಹಳ್ಳಿ, ಅಲಸೂರು ಕೆರೆ ಬಳಿ, ಬೆಂಗಳೂರು- ೪೨**
**ಪುಟ: xxxv + 769, ಬೆಲೆ : ರೂ. ೪೦೦/-**

**ನಮ್ಮ** ಸಂಸ್ಕೃತಿ, ನಮ್ಮ ಧರ್ಮ, ನಮ್ಮ ಶಾಸ್ತ್ರಗಳು—ಈ ಎಲ್ಲಕ್ಕೂ ಮೂಲ ವೇದಗಳು. ಇವು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂದು ನಾಲ್ಕು. ಇವುಗಳಲ್ಲಿ ಪ್ರತಿಯೊಂದು ವೇದವೂ ಸಂಹಿತೆ ಬ್ರಾಹ್ಮಣಗಳು ಆರಣ್ಯಕಗಳು ಉಪನಿಷತ್ತುಗಳು ಎಂದು ನಾಲ್ಕು ಭಾಗಗಳನ್ನು ಹೊಂದಿದೆ. ಇವುಗಳಲ್ಲಿ ಋಗ್ವೇದ ಸಂಹಿತೆ ಪ್ರಾಚೀನತಮ, ಇದು ಸಮಗ್ರ ವಿಶ್ವದಲ್ಲೇ ಉಪಲಬ್ಧವಾಗಿರುವ ಸಾಹಿತ್ಯಗಳಲ್ಲಿ ಅತಿ ಪ್ರಾಚೀನ ವಾದುದು. ಇದು ಅತಿ ಬೃಹತ್ತೂ ಆಗಿದೆ. ಇದರಲ್ಲಿ ೧೦ ಮಂಡಲ ಗಳೂ ೧೦೨೮ ಸೂಕ್ತಗಳೂ ೧೦,೫೫೨ ಮಂತ್ರಗಳೂ ಇವೆ. ಇಂತಹ ಋಗ್ವೇದ ಸಂಹಿತೆಯ ಸಾರವನ್ನು 'ಋಗ್ವೇದ ಸೂಕ್ತಸಾರ' ಎಂಬ ಗ್ರಂಥದಲ್ಲಿ ಶ್ರೀ ಸೂರ್ಯನಾರಾಯಣರು ಹೊರತರಲು ಪ್ರಯತ್ನಿಸಿದ್ದಾರೆ.

ಇದು ಋಗ್ವೇದ ಸಂಹಿತೆಗೆ ಭಾಷ್ಯವಾಗಲಿ ವ್ಯಾಖ್ಯಾನವಾಗಲಿ ಅಲ್ಲ. ಮಂತ್ರಾರ್ಥಗಳ ವಿವರಣೆಯಾಗಲಿ ವಿವೇಚನೆಯಾಗಲಿ ವಿಶ್ಲೇಷಣೆಯಾಗಲಿ ವಿಮರ್ಶೆಯಾಗಲಿ ಇದರಲ್ಲಿಲ್ಲ. ಮಂತ್ರಗಳ ಪ್ರತಿಪದಾರ್ಥವಾಗಲಿ ಅಥವಾ ಪ್ರತಿಮಂತ್ರದ ಅರ್ಥವಾಗಲಿ ಇಲ್ಲಿಲ್ಲ. ಪ್ರತಿಸೂಕ್ತದ ಭಾವಾರ್ಥ ಮಾತ್ರ ಇದರಲ್ಲಿದೆ. ಆದ್ದರಿಂದ ವೇದ ವೇತ್ತೃಗಳಿಗೆ, ವೇದಸಾಹಿತ್ಯದಲ್ಲಿ ಪ್ರವೇಶ ಹೊಂದಿರುವವರಿಗೆ, ವೇದದ ಪರಿಚಯ ಆಗಿರುವವರಿಗೆ ಇದರಿಂದ ಪ್ರಯೋಜನವಾಗುವುದಿಲ್ಲವಾದರೂ ವೇದದ ಪರಿಚಯವೇ ಇಲ್ಲದವರಿಗೆ ಈ ಗ್ರಂಥದಿಂದ ಋಗ್ವೇದ ಸಂಹಿತೆಯ ಸ್ಥೂಲ ಪರಿಚಯವಾದೀತು.

ಇದರಲ್ಲಿ ಮೂಲ ಮಂತ್ರಗಳನ್ನು ಕೊಟ್ಟಿಲ್ಲ. ಪ್ರತಿಸೂಕ್ತದ ಪ್ರತೀಕವನ್ನು (ಮೊದಲ ಮಂತ್ರದ ಮೊದಲ ಸ್ವಲ್ಪ ಭಾಗವನ್ನು) ಮಾತ್ರ ಕೊಟ್ಟಿದೆ. ಪ್ರತಿ ಸೂಕ್ತದ ಭಾವಾರ್ಥದ ಮೊದಲು ಆಯಾ ಸೂಕ್ತದ ಋಷಿ-ದೇವತಾ-ಛಂದಸ್ಸುಗಳನ್ನೂ ಸಾರಾಂಶವನ್ನೂ ತಿಳಿಯಲು ಇದು ಸಹಾಯಕ. ಇದರ ಭಾಷೆ ಜಟಿಲವಾಗಿಲ್ಲ; ಬಹಳ ಸರಳವಾಗಿದೆ. ಆದ್ದರಿಂದ ಯಾರೇ ಆದರೂ ಇದನ್ನು ಓದಿ ಅರ್ಥ ಮಾಡಿಕೊಳ್ಳಬಹುದಾಗಿದೆ. ವೇದದ ಅಥವಾ ಸಂಸ್ಕೃತದ ಪರಿಚಯವೇ ಇಲ್ಲದ, ಆದರೆ ವೇದದಲ್ಲಿ ಏನಿದೆ, ಏನಿರಬಹುದು ಎಂಬ ಕುತೂಹಲವುಳ್ಳ ಜನಸಾಮಾನ್ಯರಿಗೆ ಋಗ್ವೇದ ಸಂಹಿತೆಯ ಸ್ಥೂಲ ಪರಿಚಯವನ್ನು ಈ ಗ್ರಂಥ ಮಾಡಿಕೊಡುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

—ಡಾ. ರೂಪಾ

**೧. ಪುರುಷ ಸೂಕ್ತ, ಶ್ರೀ ಸೂಕ್ತ**
**ಪುಟ: ೨೦+೭೬; ಬೆಲೆ: ರೂ.೫೦/-**
**೨. ಪಂಚಸೂಕ್ತಗಳು**
**ಪುಟ: ೨೨+೮೦; ಬೆಲೆ: ರೂ.೫೦/-**
**೩. ಸಂಗ್ರಹ ರಾಮಾಯಣ**
**ಪುಟ:೧೨+೨೩೮; ಬೆಲೆ: ರೂ.೧೦೦/**
**ಅನುವಾದಕರು: ಶ್ರೀ ಬನ್ನಂಜೆ ಗೋವಿಂದಾಚಾರ್ಯ**
**ಪ್ರಕಾಶಕರು:**
**ಈಶಾವಾಸ್ಯ ಪ್ರತಿಷ್ಠಾನ, ಈಶಾವಾಸ್ಯಂ, ಅಂಬಲಪಾಡಿ**
**ಉಡುಪಿ - ೫೭೬ ೧೦೩**

**ವೈದಿಕ** ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧವಾಗಿರುವ ಭಾಗಗಳೆಂದರೆ ಸೂಕ್ತಗಳು. ನಿತ್ಯಪೂಜೆ, ದೇವತಾರ್ಚನೆಗಳಲ್ಲಿ ಬಳಕೆಯಾಗುವ ಪುರುಷಸೂಕ್ತ, ಶ್ರೀಸೂಕ್ತ ಹಾಗೂ ಪಂಚ ಸೂಕ್ತಗಳನ್ನು ಕಲಿತು ಪಠಿಸುವುದು ವಾಡಿಕೆ. ಕಂಠಪಾಠದೊಂದಿಗೆ ಮಂತ್ರಗಳ ಅರ್ಥಜ್ಞಾನ ಮತ್ತು ಪ್ರಾಮುಖ್ಯವನ್ನು ಅರಿತು ಪಠಿಸಿದರೆ ಕ್ರಿಯೆ ಹೆಚ್ಚು ಫಲಕಾರಿಯಾಗುವುದು. ಕನ್ನಡದಲ್ಲಿ ಈ ಸೂಕ್ತಗಳ ಅನುವಾದವನ್ನು ಕೊಡುವ ಸಾಹಿತ್ಯ ಅತಿ ವಿರಳ. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಅನುವಾದಿಸಿರುವ ಸೂಕ್ತಗಳು ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿವೆ. ಯಾವುದೇ ಸಂಪ್ರದಾಯಕ್ಕೆ ಸೀಮಿತವಾಗಿರದೆ, ಅತ್ಯಂತ ವಿದ್ವತ್ಪೂರ್ಣವಾದ ವ್ಯಾಖ್ಯಾನವನ್ನು ನೀಡಿದ್ದಾರೆ. ಸ್ವರಸಹಿತ ಸಂಹಿತಾಪಾಠ, ಮಂತ್ರಗಳ ಪದಪಾಠ, ಕನ್ನಡದಲ್ಲಿ ಪ್ರತಿಪದಾರ್ಥ ಮತ್ತು ಸಂಪೂರ್ಣ ಭಾವಾನುವಾದ ಕೊಟ್ಟಿದ್ದು ಜನಸಾಮಾನ್ಯರಿಗೂ ಬೋಧಗಮ್ಯವಾಗುವಂತಿದೆ. ಪಂಚಸೂಕ್ತಗಳಿಗೆ ಸಂಸ್ಕೃತದಲ್ಲಿ ಸಂಕ್ಷಿಪ್ತವಾದ ಟೀಕೆಯನ್ನು ಸೇರಿಸಲಾಗಿದೆ. ಪ್ರತಿಯೊಂದು ಮಂತ್ರದ ಅಡಿಯಲ್ಲಿರುವ ಟಿಪ್ಪಣಿಗಳು ಕ್ಲಿಷ್ಟಶಬ್ದಗಳ ಉತ್ಪತ್ತಿ, ಪರಿಚಯ ಹಾಗೂ ವಿವಿಧ ಅರ್ಥಗಳನ್ನು ಕೊಟ್ಟು, ಮಂತ್ರಗಳನ್ನು ಸರಿಯಾಗಿ ತಿಳಿಯುವಲ್ಲಿ ಸಹಕರಿಸುತ್ತವೆ. ಪ್ರತಿ ಮಂತ್ರವನ್ನೂ ಕನ್ನಡ ಪದ್ಯರೂಪದಲ್ಲಿ ರಚಿಸಿರುವುದು ಈ ಕೃತಿಯ ವೈಶಿಷ್ಟ್ಯ. ಭಾಷೆಯು ಅತ್ಯಂತ ಸರಳವಾಗಿದ್ದು ಓದುಗನ ಮನಸ್ಸಿಗೆ ತ್ರಾಸಕೊಡದೆ ಓದಿಸಿಕೊಂಡು ಹೋಗುತ್ತದೆ.

ಅಂತೆಯೆ ಶ್ರೀಮಧ್ವಾಚಾರ್ಯರಿಂದ ಪ್ರಶಂಸಿತವಾಗಿರುವ ಶ್ರೀನಾರಾಯಣಪಂಡಿತಾಚಾರ್ಯರ 'ಸಂಗ್ರಹ ರಾಮಾಯಣ' ಸಂಸ್ಕೃತ ಸಾಹಿತ್ಯದಲ್ಲಿ ಸುಪ್ರಸಿದ್ಧ. ಅದರ ಕನ್ನಡಾನುವಾದವನ್ನು ಮಾಡಿ ಕನ್ನಡಿಗರಿಗೆ ಉಣಬಡಿಸಿರುವ ಬನ್ನಂಜೆಯವರ ಶ್ರಮ ಸಾರ್ಥಕ. ರಾಮಾಯಣದಲ್ಲಿ ಬರುವ ಪ್ರಮುಖ ಅಂಶಗಳನ್ನೆಲ್ಲ ವಿಷದವಾಗಿ ತಿಳಿಸುವ ಈ ಗ್ರಂಥ ಸೊಗಸಾಗಿದ್ದು ಪಂಡಿತ ಪಾಮರರಿಗೆ ಅಚ್ಚುಮೆಚ್ಚಾಗುವಂತಿದೆ.

ಸುಂದರವಾದ ಮುಖಪುಟವಿನ್ಯಾಸ, ಉತ್ತಮವಾದ ಕಾಗದ ಹಾಗೂ ಮುದ್ರಣದೊಂದಿಗೆ ಆಕರ್ಷಕ ರೇಖಾಚಿತ್ರಗಳನ್ನು ಸೇರಿಸಲಾಗಿದೆ. ಬೆಲೆಯೂ ಕೂಡ ಸಮಂಜಸ. ಶ್ರದ್ಧಾಳುಗಳು ಓದಲೇ ಬೇಕಾದ ಗ್ರಂಥಗಳಿವು.

— ಸ್ವಾಮಿ ಆತ್ಮಜ್ಞಾನಂದ